**ಕರ್ನಾಟಕ ಸರ್ಕಾರ**

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–01

ದೂರವಾಣಿ ಸಂಖ್ಯೆ:080 22271998 ಇ–ಮೇಲ್ ವಿಳಾಸ:jd_mms@yahoo.co.in/mdmskarnataka@gmail.com

ಸಂಖ್ಯೆ: ಎಂ2/ಅ.ದಾ/ಆಹಾರ ಧಾನ್ಯ ವಿತರಣೆ//18/2020–21 ದಿನಾಂಕ: 05.11.2020

## –: ಸುತ್ತೋಲೆ :–

**ವಿಷಯ:** ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್–2020ರ ಮಾಹೆಯ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ 108 ದಿನಗಳಿಗೆ ಬಿಸಿಯೂಟದ ಬದಲಾಗಿ ಆಹಾರ ಭದ್ರತಾ ಭತ್ಯೆಯಂತೆ ಆಹಾರ ಧಾನ್ಯಗಳನ್ನು ವಿತರಣೆ ಮಾಡುವ ಕುರಿತು.

**ಉಲ್ಲೇಖ :**
3) ಎಂ.ಹೆಚ್.ಆರ್.ಡಿ. ಅರೆ ಸರ್ಕಾರಿ ಪತ್ರ ಸಂಖ್ಯೆ: 1-2/2020 Desk (MDM) Dated 21.08.2020
4) ಸರ್ಕಾರದ ಆದೇಶ ಸಂಖ್ಯೆ : ಇಪಿ 46 ಎಂಎಂಎಸ್ 2020 ಬೆಂಗಳೂರು, ದಿನಾಂಕ : 03.11.2020

* * * * *

ಕೋವಿಡ್–19 ಹರಡದಂತೆ ತಡೆಗಟ್ಟುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ 2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಶಾಲೆಗಳು ಆರಂಭವಾಗದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಅಗತ್ಯ ಪೌಷ್ಟಿಕಾಂಶವನ್ನು ಒದಗಿಸಲು ಮಧ್ಯಾಹ್ನ ಉಪಾಹಾರ ಯೋಜನೆಯಡಿ ಬಿಸಿಯೂಟದ ಬದಲಾಗಿ ಆಹಾರ ಭದ್ರತೆ ಕಾಯ್ದೆ ಅನ್ವಯ ಆಹಾರ ಭದ್ರತೆ ಭತ್ಯೆಯನ್ನು ನೀಡುವಂತೆ ಉಲ್ಲೇಖ (01) ಎಂ.ಹೆಚ್.ಆರ್.ಡಿ. ಪತ್ರದಲ್ಲಿ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿ ಮಕ್ಕಳಿಗೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್–2020ರ ಮಾಹೆಯ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಉಳಿದ 108 ದಿನಗಳಿಗೆ ಆಹಾರ ಭದ್ರತಾ ಕಾಯ್ದೆಯಡಿ ಆಹಾರ ಭದ್ರತಾ ಭತ್ಯೆಯಂತೆ ಬಿಸಿಯೂಟದ ಬದಲಾಗಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲು ಉಲ್ಲೇಖ (02) ರ ಆದೇಶದಲ್ಲಿ ಸೂಚಿಸಲಾಗಿದೆ.

ಈ ಕುರಿತು ದಿನಾಂಕ :04.11.2020 ರಂದು ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ರವರೊಂದಿಗೆ ಚರ್ಚಿಸಿದಂತೆ, 108 ದಿನಗಳಿಗೆ ಆಹಾರ ಧಾನ್ಯಗಳನ್ನು ಖರೀದಿಸಿ ದಾಸ್ತಾನುಗೊಳಿಸಲು ಗೋದಾಮುಗಳಲ್ಲಿ ಸ್ಥಳಾವಕಾಶದ ಅಭಾವವಾಗುವುದರಿಂದ **ಮೊದಲ ಹಂತದಲ್ಲಿ** ಜೂನ್ ಮತ್ತು ಜುಲೈ ಮಾಹೆಯ 53 ದಿನಗಳಿಗೆ ಮತ್ತು ಎರಡನೆ ಹಂತದಲ್ಲಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳ 55 ದಿನಗಳಿಗೆ ಆಹಾರ ಧಾನ್ಯಗಳನ್ನು ವಿತರಣೆಗೆ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ.

ಈಗಾಗಲೇ ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಗೆ ಜೂನ್ ಮತ್ತು ಜುಲೈ ಮಾಹೆಯ 53 ದಿನಗಳಿಗೆ ಆಹಾರ ಧಾನ್ಯಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದು, ಖರೀದಿ ಪ್ರಕ್ರಿಯೆ ಮುಗಿಸಿ ಸರಬರಾಜು ಕಾರ್ಯ ಪ್ರಗತಿಯಲ್ಲಿದೆ. ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಯು ಆಹಾರ ಧಾನ್ಯಗಳನ್ನು ಈಗಾಗಲೇ ಸರಬರಾಜು ಮಾಡಿರುವ ತಾಲ್ಲೂಕು/ಜಿಲ್ಲೆಗಳು ಕೂಡಲೇ ವಿತರಣೆ ಕಾರ್ಯ ಪ್ರಾರಂಭಿಸುವುದು. ಆಹಾರ

ಧಾನ್ಯ ಸರಬರಾಜಾಗದೇ ಇರುವ ತಾಲ್ಲೂಕು/ಜಿಲ್ಲೆಗಳು ಕೂಡಲೇ ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಯನ್ನು ಸಂಪರ್ಕಿಸಿ, ಗುಣಮಟ್ಟದ ಆಹಾರ ಧಾನ್ಯಗಳನ್ನು ಪಡೆದು ವಿತರಿಸಲು ಕ್ರಮವಹಿಸುವುದು. ಈಗಾಗಲೇ ಸರಬರಾಜಾಗಿ ಗೋದಾಮುಗಳಲ್ಲಿ ದಾಸ್ತಾನುಗೊಳಿಸಿರುವ ಆಹಾರ ಧಾನ್ಯಗಳ ಗುಣಮಟ್ಟದ ಕುರಿತು ಗುಣಮಟ್ಟ ಪರಿಶೀಲನಾ ಸಮಿತಿಯಿಂದ ಪರಿಶೀಲಿಸಿ ಗುಣಮಟ್ಟದ ಬಗ್ಗೆ ಖಾತ್ರಿಪಡಿಸಿಕೊಂಡು ಬಳಕೆಗೆ ಯೋಗ್ಯವಾಗಿದ್ದಲ್ಲಿ ಮಾತ್ರ ಎತ್ತುವಳಿ ಮಾಡುವುದು.

**ಎರಡನೇ ಹಂತದ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳ 55 ದಿನಗಳ ಆಹಾರ ಧಾನ್ಯಗಳ ವಿತರಣಾ ಕಾರ್ಯಕ್ಕೆ ಸಂಬಂಧಿಸಿದಂತೆ ಶೀಘ್ರದಲ್ಲಿಯೇ ಪ್ರತ್ಯೇಕ ಆದೇಶವನ್ನು ನೀಡಲಾಗುವುದು.**

ಮೊದಲನೇ ಹಂತದ ವಿತರಣಾ ಕಾರ್ಯದ ಆಹಾರ ಧಾನ್ಯಗಳನ್ನು ಗೋದಾಮುಗಳಿಂದ ಎತ್ತುವಳಿ ಮಾಡಿದ ಕೂಡಲೇ **ಎರಡನೇ ಹಂತದ** ವಿತರಣೆಗಾಗಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳ 55 ದಿನಗಳಿಗೆ ಜಿಲ್ಲಾವಾರು ಅಗತ್ಯವಿರುವ ಆಹಾರ ಧಾನ್ಯಗಳ ಬೇಡಿಕೆ ಪಟ್ಟಿಯನ್ನು ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಗೆ ಸಲ್ಲಿಸಿ ಕೂಡಲೇ ಸರಬರಾಜು ಮಾಡಿಕೊಳ್ಳುವುದು.

**ಮೊದಲನೆ ಹಂತದಲ್ಲಿ ಮಕ್ಕಳಿಗೆ ಆಹಾರ ಧಾನ್ಯ (ಅಕ್ಕಿ ಮತ್ತು ಗೋಧಿ) ಹಾಗೂ ಪರಿವರ್ತನಾ ವೆಚ್ಚದ ಬದಲಿಗೆ ತೊಗರಿಬೇಳೆಯನ್ನು ಕೆಳಗೆ ತಿಳಿಸಿರುವ ಪ್ರಮಾಣದಲ್ಲಿ ಮತ್ತು ಮಾನದಂಡಗಳ ಅನ್ವಯ ವಿತರಣೆ ಮಾಡಲು ಶಾಲಾ ಮುಖ್ಯಸ್ಥರು ಈ ಕೆಳಕಂಡ ಮಾರ್ಗಸೂಚಿಯಂತೆ ಅಗತ್ಯ ಕ್ರಮವನ್ನು ಪಾಲಿಸಲು ಸೂಚಿಸಿದೆ :**

1. **ಮಧ್ಯಾಹ್ನ ಉಪಾಹಾರ ಯೋಜನೆಯಡಿ ಪ್ರತಿ ದಿನಕ್ಕೆ ಪ್ರತಿ ಮಗುವಿಗೆ ನಿಗದಿಪಡಿಸಿರುವ ಆಹಾರ ಧಾನ್ಯಗಳ ಪ್ರಮಾಣದಂತೆ ಮೊದಲ ಹಂತದಲ್ಲಿ 53 ದಿನಗಳಿಗೆ (ಜೂನ್ ಮತ್ತು ಜುಲೈ-2020) ಮತ್ತು ಎರಡನೇ ಹಂತದ 55 ದಿನಗಳಿಗೆ (ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್-2020) ಪ್ರತ್ಯೇಕವಾಗಿ ಲೆಕ್ಕಚಾರ ಮಾಡಿ ಎರಡು ಹಂತದಲ್ಲಿ ವಿತರಿಸುವುದು. (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)**
2. ಈ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಪ್ರಥಮ ಆಧ್ಯತೆಯ ಮೇರೆಗೆ ಆಹಾರ ಧಾನ್ಯಗಳ ವೆಚ್ಚ, ಅಡುಗೆ ತಯಾರಿಕೆ ವೆಚ್ಚ (ತೊಗರಿಬೇಳೆ ಖರೀದಿಸಲು), ಸಾಗಾಣಿಕಾ ವೆಚ್ಚ ಮತ್ತು ಕೆ.ಎಫ್.ಸಿ.ಎಸ್.ಸಿ. ಸಂಸ್ಥೆಗೆ ಪಾವತಿಸಲಾಗುವ ಸೇವಾ ಶುಲ್ಕದ ವೆಚ್ಚಗಳನ್ನು ಭರಿಸಲು ಉಪಯೋಗಿಸತಕ್ಕದ್ದು.
3. 1 ರಿಂದ 5ನೇ ತರಗತಿವರೆಗೆ ಪ್ರತಿ ದಿನಕ್ಕೆ ಪ್ರತಿ ಮಗುವಿಗೆ 100ಗ್ರಾಂ ಅಕ್ಕಿ/ಗೋಧಿ ಮತ್ತು ಪ್ರತಿ ದಿನಕ್ಕೆ ಪ್ರತಿ ಮಗುವಿಗೆ ಪರಿವರ್ತನಾ ವೆಚ್ಚ ರೂ.4.97/-ಗಳ ಮೊತ್ತಕ್ಕೆ ಸಮವಾಗಿ ದೊರೆಯುವ 58 ಗ್ರಾಂ. ತೊಗರಿಬೇಳೆಯನ್ನು ಮೊದಲ ಹಂತದ 53 ದಿನಗಳಿಗೆ ಲೆಕ್ಕಹಾಕಿ ವಿತರಣೆಗೆ ಅಗತ್ಯ ಕ್ರಮವಹಿಸುವುದು.
4. 6 ರಿಂದ 10ನೇ ತರಗತಿವರೆಗೆ ಪ್ರತಿ ದಿನಕ್ಕೆ ಪ್ರತಿ ಮಗುವಿಗೆ 150ಗ್ರಾಂ ಅಕ್ಕಿ/ಗೋಧಿ ಮತ್ತು ಪ್ರತಿ ದಿನಕ್ಕೆ ಪ್ರತಿ ಮಗುವಿಗೆ ಪರಿವರ್ತನಾ ವೆಚ್ಚ ರೂ.7.45/-ಗಳ ಮೊತ್ತಕ್ಕೆ ಸಮವಾಗಿ ದೊರೆಯುವ 87 ಗ್ರಾಂ. ತೊಗರಿಬೇಳೆಯಂತೆ 53 ದಿನಗಳಿಗೆ ಲೆಕ್ಕಹಾಕಿ ವಿತರಣೆಗೆ ಅಗತ್ಯ ಕ್ರಮವಹಿಸುವುದು. (1 ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ ಮತ್ತು 9 ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ ನಿಗದಿಪಡಿಸಿರುವ ಪರಿವರ್ತನಾ ವೆಚ್ಚದ ಮೊತ್ತಕ್ಕೆ ಮೀರದಂತೆ)
5. **1 ರಿಂದ 8ನೇ ತರಗತಿ ಮಕ್ಕಳಿಗೆ ಆಹಾರ ಧಾನ್ಯಗಳನ್ನು ವಿತರಿಸುವಾಗ ಒಟ್ಟು 53 ದಿನಗಳಲ್ಲಿ 45 ದಿನಗಳಿಗೆ ಅಕ್ಕಿ ಮತ್ತು 8 ದಿನಗಳಿಗೆ ಗೋಧಿಯನ್ನು ಮತ್ತು 9 ಮತ್ತು 10ನೇ ತರಗತಿ ಮಕ್ಕಳಿಗೆ 53 ದಿನಗಳಿಗೂ ಅಕ್ಕಿಯನ್ನು ಅನುಬಂಧದಲ್ಲಿ ವಿವರಿಸಿರುವಂತೆ ವಿತರಿಸುವುದು.**

ಅನುಬಂಧ

| ಕ್ರಮ ಸಂಖ್ಯೆ | ತರಗತಿ | ಒಟ್ಟು 53 ದಿನಗಳಿಗೆ ವಿತರಿಸಬೇಕಿರುವ ಅಕ್ಕಿ ಮತ್ತು ಗೋಧಿಯ ಪ್ರಮಾಣ | ಪ್ರತಿ ದಿನಕ್ಕೆ ಪ್ರತಿ ವಿದ್ಯಾರ್ಥಿಗೆ ನಿಗದಿಯಾಗಿರುವ ಪರಿವರ್ತನಾ ವೆಚ್ಚ | ಪ್ರತಿ ಮಗುವಿಗೆ 53 ದಿನಗಳಿಗೆ ನೀಡಬೇಕಿರುವ ಒಟ್ಟು ಪರಿವರ್ತನಾ ವೆಚ್ಚ | ಪರಿವರ್ತನಾ ವೆಚ್ಚಕ್ಕೆ ಬದಲಾಗಿ 53 ದಿನಗಳಿಗೆ ನೀಡಬೇಕಾದ ಒಟ್ಟು ತೊಗರಿಬೇಳೆ ಪ್ರಮಾಣ |
|---|---|---|---|---|---|
| 1 | 1 ರಿಂದ 5ನೇ ತರಗತಿ | ಅಕ್ಕಿ 4 ಕೆ.ಜಿ. 500ಗ್ರಾಂ (45 ದಿನಗಳಿಗೆ) 800 ಗ್ರಾಂ ಗೋಧಿ (08 ದಿನಗಳಿಗೆ) (ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ 100 ಗ್ರಾಂ ಅಕ್ಕಿ/ಗೋಧಿಯಂತೆ) | ರೂ.4.97/- | ರೂ.263.41 (53 ದಿನ x ರೂ. 4.97 ರಂತೆ) | 3 ಕೆ.ಜಿ. 74 ಗ್ರಾಂ. ತೊಗರಿಬೇಳೆ (ಪ್ರತಿ ದಿನಕ್ಕೆ 58 ಗ್ರಾಂ ನಂತೆ) |
| 2 | 6 ರಿಂದ 8ನೇ ತರಗತಿ | ಅಕ್ಕಿ 6 ಕೆ.ಜಿ. 750 ಗ್ರಾಂ (45 ದಿನಗಳಿಗೆ) 1 ಕೆ.ಜಿ. 200 ಗ್ರಾಂ ಗೋಧಿ (08 ದಿನಗಳಿಗೆ) (ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ 150 ಗ್ರಾಂ ಅಕ್ಕಿ/ಗೋಧಿಯಂತೆ) | ರೂ.7.45/- | ರೂ.394.85 (53 ದಿನ x ರೂ.7.45 ರಂತೆ) | 4 ಕೆ.ಜಿ 611 ಗ್ರಾಂ ತೊಗರಿಬೇಳೆ (ಪ್ರತಿ ದಿನಕ್ಕೆ 87 ಗ್ರಾಂ ನಂತೆ) |
| 3 | 9 ಮತ್ತು 10ನೇ ತರಗತಿ | ಅಕ್ಕಿ 7 ಕೆ.ಜಿ. 950 ಗ್ರಾಂ (53 ದಿನಗಳಿಗೆ) (ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ 150 ಗ್ರಾಂ ಅಕ್ಕಿಯಂತೆ) | ರೂ.7.45/- | ರೂ.394.85 (53 ದಿನ x ರೂ.7.45 ರಂತೆ) | 4 ಕೆ.ಜಿ 611 ಗ್ರಾಂ ತೊಗರಿಬೇಳೆ (ಪ್ರತಿ ದಿನಕ್ಕೆ 87 ಗ್ರಾಂ ನಂತೆ) |

6. ಪ್ರತಿ ವಿದ್ಯಾರ್ಥಿಗೆ ವಿತರಣೆ ಮಾಡುವ ಆಹಾರ ಧಾನ್ಯಗಳು ಮತ್ತು ಪ್ರಮಾಣದ ಬಗ್ಗೆ ಸಾರ್ವಜನಿಕರ ಗಮನಕ್ಕಾಗಿ ಶಾಲಾ ಸೂಚನಾ ಫಲಕದಲ್ಲಿ ನಮೂದಿಸಿ ಸೂಕ್ತ ಸ್ಥಳದಲ್ಲಿ ಪ್ರದರ್ಶಿಸಬೇಕು..

7. ಶಾಲೆಯ ಎಲ್ಲಾ ಮಕ್ಕಳು / ಪೋಷಕರನ್ನು ಒಂದೇ ಬಾರಿಗೆ ಶಾಲೆಗೆ ಕರೆಸದೇ ಸೀಮಿತ ಸಂಖ್ಯೆಯಲ್ಲಿ ಕರೆಯಿಸಿ ಕೋವಿಡ್-19 ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡಿಕೊಂಡು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು ಆಹಾರ ಸಾಮಗ್ರಿಗಳನ್ನು ಹಂತ ಹಂತವಾಗಿ ವಿತರಿಸುವುದು.
8. ವಿದ್ಯಾರ್ಥಿಗಳಿಗೆ ವಿತರಿಸಲಾಗುವ ಆಹಾರ ಧಾನ್ಯಗಳು ಉತ್ತಮ ಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು.
9. ಸ್ವಯಂ ಸೇವಾ ಸಂಸ್ಥೆಗಳಿಂದ ಬಿಸಿಯೂಟ ಸರಬರಾಜಾಗುತ್ತಿರುವ ಶಾಲೆಗಳಿಗೆ ಸಂಬಂಧಿಸಿದ ಸ್ವಯಂ ಸೇವಾ ಸಂಸ್ಥೆಗಳೇ ಖುದ್ದಾಗಿ ಮಕ್ಕಳ ಸಂಖ್ಯೆಗನುಗುಣವಾಗಿ ಸದರಿ ಶಾಲೆಗಳಿಗೆ ಆಹಾರಧಾನ್ಯ (ಅಕ್ಕಿ ಮತ್ತು ಗೋಧಿ) ಮತ್ತು ಪರಿವರ್ತನಾ ವೆಚ್ಚಕ್ಕೆ ಬದಲಾಗಿ ತೊಗರಿಬೇಳೆಯನ್ನು ಮಾತ್ರ ಪ್ರತಿ ವಿದ್ಯಾರ್ಥಿಗಳಿಗೆ ಕ್ರಮಸಂಖ್ಯೆ 03 ಮತ್ತು 04 ರಂತೆ ವಿತರಣೆ ಮಾಡುವುದು.
10. COVID-19 ವೈರಾಣು ಸೋಂಕು ತಡೆಗಟ್ಟುವ ಹಿನ್ನೆಲೆಯಲ್ಲಿ ಎಲ್ಲಾ ಅಗತ್ಯ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು, ಆಹಾರ ಸಾಮಗ್ರಿಗಳನ್ನು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಸಹ ಶಿಕ್ಷಕರ ಸಹಕಾರದೊಂದಿಗೆ ಮಕ್ಕಳು/ಮಕ್ಕಳ ಪೋಷಕರಿಗೆ ವಿತರಿಸುವುದು. ಆಹಾರ ಧಾನ್ಯ ವಿತರಿಸುವ ಸಿಬ್ಬಂದಿಗಳು ಮತ್ತು ಸ್ವೀಕರಿಸಲು ಬರುವ ಮಕ್ಕಳು/ಪೋಷಕರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಹಾಗೂ ಸ್ಯಾನಿಟೈಜರ್ ಬಳಸಬೇಕು. ಸಾಲಾಗಿ ನಿಲ್ಲುವಾಗ ಕನಿಷ್ಟ 06 ಅಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳಬೇಕು. ಮಕ್ಕಳು/ಪೋಷಕರ ಘನತೆಗೆ ಧಕ್ಕೆಬಾರದಂತೆ ಕಾಳಜಿಯೊಂದಿಗೆ ಸಹಕರಿಸಿ ಸೂಕ್ತ ಕ್ರಮದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ಮಾಡಿಕೊಡದೇ ವಿತರಿಸುವುದು. ವಿತರಣೆ ಮಾಡಿದ ನಂತರ ಪೋಷಕರು/ಮಕ್ಕಳಿಂದ ಸಹಿ ಪಡೆದು ದಾಖಲೆ ವಹಿ (Distribution Reciept Register) ಯನ್ನು ಶಾಲಾ ಹಂತದಲ್ಲಿ ಕಡ್ಡಾಯವಾಗಿ ನಿರ್ವಹಣೆ ಮಾಡುವುದು.
11. ಆಹಾರ ಧಾನ್ಯಗಳ ವಿತರಣೆಯನ್ನು ಶಾಲಾ ಸಮಯದಲ್ಲಿ ಮಾತ್ರ ವಿತರಿಸುವುದು. ಶಾಲೆಯಲ್ಲಿ ಆಹಾರ ಧಾನ್ಯಗಳ ವಿತರಣೆ ಮಾಡುತ್ತಿರುವ ಕುರಿತು ಶಾಲಾಭಿವೃದ್ಧಿ ಸಮಿತಿ ಸದಸ್ಯರ ಮೂಲಕ ಪೋಷಕರಿಗೆ ಸಕಾಲದಲ್ಲಿ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.
12. ಆಹಾರ ಧಾನ್ಯಗಳ ವಿತರಣೆಯ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಸದಸ್ಯರು ಆಹಾರ ಧಾನ್ಯಗಳ ವಿತರಣೆ ಪ್ರಮಾಣವನ್ನು ಪರಿಶೀಲಿಸಲು ತಪ್ಪದೇ ಉಪಸ್ಥಿತರಿರುವಂತೆ ನೋಡಿಕೊಳ್ಳುವುದು.
13. ಆಹಾರ ಧಾನ್ಯಗಳ ವಿತರಣಾ ಕಾರ್ಯಕ್ಕೆ ಅಡುಗೆ ಸಿಬ್ಬಂದಿಯ ಸೇವೆಯನ್ನು ಬಳಸಿಕೊಳ್ಳುವುದು.
14. ವಿದ್ಯಾರ್ಥಿಗಳಿಗೆ ವಿತರಿಸುವ ಆಹಾರ ಧಾನ್ಯಗಳ ಪ್ರಮಾಣದಲ್ಲಿ ಹಾಗೂ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳುವುದು.

**ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು**

1. ರಾಜ್ಯದಲ್ಲಿ COVID-19 ವೈರಾಣು ಸೋಂಕಿನ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆ ಮಿತವ್ಯಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಸೂಕ್ತ ಲೆಕ್ಕ ಪತ್ರವನ್ನು ಇಡತಕ್ಕದ್ದು
3. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳು ಹಾಗೂ ಭರಿಸಲಾದ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಅವಲೋಕನ (New Decision Support System) ತಂತ್ರಾಂಶದಲ್ಲಿ ಇಂದೀಕರಿಸುವುದು.
4. ಪ್ರತಿ ತಾಲ್ಲೂಕಿನ ಮೇಲ್ವಿಚಾರಣಾ ಸಿಬ್ಬಂದಿಗಳು (ಸಿ.ಆರ್.ಪಿ., ಬಿ.ಆರ್.ಪಿ. ಮತ್ತು ಇ.ಸಿ.ಒ) ಶಾಲೆಗಳಲ್ಲಿ ಆಹಾರ ಧಾನ್ಯ ವಿತರಣೆ ಮೇಲ್ಕಂಡ ರೀತಿಯಲ್ಲಿ ಆಗುತ್ತಿರುವ ಬಗ್ಗೆ ಆಗಿಂದಾಗ್ಗೆ ಖಾತ್ರಿಪಡಿಸಿಕೊಳ್ಳುವುದು.

5. ವಿದ್ಯಾರ್ಥಿಗಳಿಗೆ ಆಹಾರ ಧಾನ್ಯ ವಿತರಣೆಯ ದೈನಂದಿನ ಪ್ರಗತಿ ಮಾಹಿತಿಯನ್ನು SATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಶಾಲಾ ಮುಖ್ಯಸ್ಥರು ತಪ್ಪದೇ ದಾಖಲಿಸುವುದು. ಶಾಲಾವಾರು ವಿತರಣಾ ಪ್ರಗತಿ ಮಾಹಿತಿ SATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಶಾಲಾ ಮುಖ್ಯಸ್ಥರು ಅಪ್‌ಲೋಡ್ ಮಾಡಿರುವ ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) ಮತ್ತು ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಇವರು ಪ್ರತಿ ದಿನ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
6. ಆಹಾರ ಧಾನ್ಯ ವಿತರಣೆಯ ಸಂದರ್ಭದಲ್ಲಿ ಅನುಸರಿಸಿದ ಅತ್ಯುತ್ತಮ ಆಚರಣೆಗೆ (Best Practices) ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಿಂದ ಒಂದು 5 ರಿಂದ 7 ನಿಮಿಷಗಳ ವಿಡಿಯೋ ಡಾಕ್ಯುಮೆಂಟರಿ ಮತ್ತು ಅತ್ಯುತ್ತಮವಾದ 5 ಛಾಯಚಿತ್ರಗಳನ್ನು SATS-MDM ವೆಬ್‌ಸೈಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.

ಈ ಕಾರ್ಯಕ್ರಮವನ್ನು ಅತೀ ಶೀಘ್ರದಲ್ಲಿ ಜಂಟಿಯಾಗಿ ಜವಾಬ್ದಾರಿಯಿಂದ ನಿರ್ವಹಿಸಲು ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿಗಳು (ಅಕ್ಷರ ದಾಸೋಹ), ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ), ರವರಿಗೆ ಈ ಸೂಚಿಸಿದೆ.

6/11

(ವಿ.ಅನ್ಬುಕುಮಾರ್ ಭಾ.ಆ.ಸೇ.)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಸೂಕ್ತ ಕ್ರಮಕ್ಕಾಗಿ :**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ., ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು (ಅಕ್ಷರದಾಸೋಹ), ಜಿಲ್ಲಾ ಪಂಚಾಯತ್ ಕಾರ್ಯಾಲಯ, ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ., ರವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ತಾಲ್ಲೂಕು ಸಹಾಯಕ ನಿರ್ದೇಶಕರು (ಅಕ್ಷರದಾಸೋಹ), ತಾಲ್ಲೂಕು ಪಂಚಾಯತ್ ಕಾರ್ಯಾಲಯ, ರವರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01 ಗೌರವಗಳೊಂದಿಗೆ ಸಲ್ಲಿಸಿದೆ.
2. ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಫ್.ಸಿ.ಎಸ್.ಸಿ., ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರಿಗೆ ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್‌ರವರಿಗೆ ಮಾಹಿತಿಗಾಗಿ.
6. ಕಛೇರಿಪ್ರತಿ.